ಈ) ಈ ತಾರತಮ್ಯ ಹೋಗಲಾಡಿಸಲು ಅನೇಕ ಸಲ ವಿಧಾನ ಸಭೆಯಲ್ಲಿ ಮಂತ್ರಿಗಳು ಹೇಳಿಕೆ ನೀಡಿದ್ದರೂ ಕಾರ್ಯಗತವಾಗದಿರುವುದಕ್ಕೆ ಕಾರಣವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿ),—

ಅ) ಹೌದು.

ಆ) ಪೂರ್ವ ಪ್ರಾಥಮಿಕ ಶಾಲೆಗಳಿಗೆ ಪ್ರತ್ಯೇಕ ಅನುದಾನ ಸಂಹಿತೆ ಇಲ್ಲ.

ಇ) ಪೂರ್ವ ಪ್ರಾಥಮಿಕ ಶಿಕ್ಷಣವು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ ೧೯೬೧ರ ವ್ಯಾಪ್ತಿಯಲ್ಲಿ ಬರುವುದಿಲ್ಲವಾದ್ದರಿಂದ ೧೯೮೪-೮೫ನೇ ಸಾಲಿನಿಂದ ಹೊಸದಾಗಿ ಯಾವುದೇ ಪೂರ್ವ ಪ್ರಾಥಮಿಕ ಶಾಲೆಯನ್ನು ಅನುದಾನಕ್ಕೆ ಒಳಪಡಿಸುತ್ತಿಲ್ಲ. ಆದರೂ, ಈಗಾಗಲೇ ಅನುದಾನಕ್ಕೆ ಒಳಪಡಿಸಲಾಗಿರುವ ಸಂಸ್ಥೆಗಳಿಗೆ ಸದರಿ ಶಾಲೆಯಲ್ಲಿನ ಅನುಮೋದಿತ ಸಿಬ್ಬಂದಿ ಮುಂದುವರಿಯುವವರೆಗೂ ಅನುದಾನ ಮುಂದುವರಿಸಲಾಗುತ್ತಿದೆ.

ಈ) ಪ್ರಶ್ನೆ (ಇ)ಗೆ ಕೊಟ್ಟಿರುವ ಉತ್ತರ ಉತ್ತರದಿಂದ ಉದ್ಭವಿಸುವುದಿಲ್ಲ.

ಕಾಲೇಜು ಉಪನ್ಯಾಸಕರುಗಳ ವರ್ಗಾವಣೆ ಹಾಗೂ ಪತಿ-ಪತ್ನಿಯರುಗಳ ವರ್ಗಾವಣೆಯ ಬಗ್ಗೆ.

೬೨೨. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೭ನೇ ಜುಲೈ ಒಂದರಿಂದ ಇಲ್ಲಿಯವರೆಗೆ (ಹಿಗಿನೇ ಆಗಸ್ಟ್ ೮೭) ಸರ್ಕಾರಿ ಕಿರಿಯ ಕಾಲೇಜುಗಳ ಹಾಗೂ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವರ್ಗಾವಣೆ ಮಾಡಲಾಗಿರುವ ಉಪನ್ಯಾಸಕರುಗಳ ಸಂಖ್ಯೆ ಎಷ್ಟು ?

ಆ) ಸರ್ಕಾರದ ನಿರ್ದಿಷ್ಟ ಆದೇಶವಿದ್ದರೂ ಸದರಿ ವರ್ಗಾವಣೆಗಳನ್ನು ಕಾರ್ಯಗತ ಮಾಡಲು ಇರುವ ಮುಖ್ಯ ಕಾರಣಗಳೇನು?

ಇ) ಸದರಿ ವರ್ಗಾವಣೆಗಳಲ್ಲಿ ಪತಿ-ಪತ್ನಿಯರನ್ನು ಅಗಲಿಸಿರುವ ವರ್ಗಾವಣೆಗಳ ಸಂಖ್ಯೆ ಎಷ್ಟು ಹಾಗೂ ಇವರುಗಳಿಂದ ವರ್ಗಾವಣೆ ರದ್ದು ಮಾಡಲು ಬಂದಿರುವ ಮನವಿಗಳೆಷ್ಟು (ಅವರುಗಳ ಹೆಸರು ಮತ್ತು ವಿಳಾಸಗಳನ್ನು ನಮೂದಿಸುವುದು)?

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಸರ್ಕಾರಿ ಕಿರಿಯ ಕಾಲೇಜುಗಳಿಗೆ ಸಂಬಂಧಿಸಿದಂತೆ ೭ ಜನ ಉಪನ್ಯಾಸಕರುಗಳನ್ನು ವರ್ಗ ಮಾಡಲಾಗಿದೆ.

ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಬಂಧಿಸಿದಂತೆ ಒಬ್ಬರು ಉಪನ್ಯಾಸಕರನ್ನು ಮಾತ್ರ ವರ್ಗ ಮಾಡಲಾಗಿದೆ.

ಆ) ಸರ್ಕಾರಿ ಕಿರಿಯ ಕಾಲೇಜುಗಳಿಗೆ ಸಂಬಂಧಿಸಿದಂತೆ ವರ್ಗವಾದ ೭ ಉಪನ್ಯಾಸಕರುಗಳ ಪೈಕಿ ೪ ಮಂದಿ ಉಪನ್ಯಾಸಕರನ್ನು ವೈದ್ಯಕೀಯ ಆಧಾರದ ಮೇಲೆ ವರ್ಗಾಯಿಸಲಾಗಿದೆ. ಇನ್ನು ೩ ಜನ ಉಪನ್ಯಾಸಕರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ವೈದ್ಯಕೀಯ ದೃಷ್ಟಿಯಿಂದ ಬದಲಾವಣೆ ಮಾಡಿರುವವರಿಗೆ ಸ್ಥಳಾವಕಾಶ ಮಾಡಿಕೊಡುವ ಸಂದರ್ಭದಲ್ಲಿ ಈ ವರ್ಗಾವಣೆಗಳು ಆಗಿವೆ.

ಪ್ರಥಮ ದರ್ಜೆ ಕಾಲೇಜಿಗೆ ಸಂಬಂಧಿಸಿದಂತೆ ವರ್ಗವಾದ ಒಬ್ಬರು ಉಪನ್ಯಾಸಕರೆಂದರೆ ಶ್ರೀಮತಿ ವಿನೋದ ಪ್ರಭಾ ಅವರ ಪತಿಯವರು ಡಿ.ಐ.ಜಿ. ಆಗಿದ್ದು ಅವರನ್ನು ಮಂಗಳೂರಿನಿಂದ ಬೆಂಗಳೂರಿಗೆ ವರ್ಗಾಯಿಸಿದ ಪ್ರಯುಕ್ತ ಈ ಉಪನ್ಯಾಸಕರನ್ನು ಮಂಗಳೂರಿನಿಂದ ಬೆಂಗಳೂರಿಗೆ ವರ್ಗಾಯಿಸಲಾಗಿದೆ.

ಇ) ಸದರಿ ವರ್ಗಾವಣೆಯಲ್ಲಿ ಪತಿಪತ್ನಿಯರನ್ನು ಅಗಲಿಸಿರುವ ಸಂಖ್ಯೆಗಳು ಯಾವುದೂ ಇಲ್ಲ. ರದ್ದು ಮಾಡಲು ಬಂದ ಮನವಿಗಳು ಮತ್ತೂರು ಇವೆ.

ವರ್ಗಾವಣೆ ರದ್ದುಪಡಿಸಲು ಕೋರಿದವರ ಹೆಸರು ಮತ್ತು ವಿಳಾಸ

೧. ಶ್ರೀ ಇಲಿಯಾಸ್ ಅಹ್ಮದ್, ಆಂಗ್ಲ ಉಪನ್ಯಾಸಕರು, ಸ.ಕಿ.ಕಾ–ಶ್ರೀರಾಂಪುರ, ಚಿತ್ರದುರ್ಗ ಜಿಲ್ಲೆ.

೨. ಶ್ರೀ ಹೆಚ್.ಆರ್. ರಾಮಚಂದ್ರರಾವ್, ರಾಜ್ಯಶಾಸ್ತ್ರ ಉಪನ್ಯಾಸಕರು, ಸ.ಪ.ಪೂ.ಕಾ–ದೇವನೂರು.

೩. ಶ್ರೀ ಎಂ.ವೈ. ನಟರಾಜ್, ಇತಿಹಾಸ ಉಪನ್ಯಾಸಕರು, ಸ.ಪ.ಪೂ.ಕಾ–ಅಲ್ಮೂರು.

ಬೀಜಗಳ ಉತ್ಪಾದನೆಯ ಬಗ್ಗೆ.

೪೦೬ ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲುಗಳಲ್ಲಿ ಕರ್ನಾಟಕ ಬೀಜ ನಿಗಮ ಹಾಗೂ ಎಣ್ಣೆಕಾಳು ಅಭಿವೃದ್ಧಿ ನಿಗಮಗಳಿಗೆ ಬೀಜೋತ್ಪತ್ತಿ ಮಾಡಲು ಸರ್ಕಾರದವರಿಂ ಮಂಜೂರು ಮಾಡಿದ ಹಣವೆಷ್ಟು?

ಆ) ಈ ನಿಗಮಗಳು ರಾಜ್ಯದಲ್ಲಿ ಬೀಜೋತ್ಪತ್ತಿ ಮಾಡಲು ಆಯ್ಕೆ ಮಾಡಿರುವ ಸ್ಥಳಗಳು ಯಾವುವು ?

ಇ) ಈ ಎರಡು ವರ್ಷಗಳಲ್ಲಿ ಈ ಎರೆಡೂ ನಿಗಮಂಗಳು ಉತ್ಪಾದನೆ ಮಾಡಿದ ಬೀಜಗಳು ಯಾವುವು, ಅವುಗಳ ಪ್ರಮಾಣವೆಷ್ಟು?

ಈ) ರಾಜ್ಯದಲ್ಲಿ ಈ ವರ್ಷ ಉಂಟಾಗಿರುವ ಬೀಜದ ಕೊರತೆಯನ್ನು ನಿವಾರಿಸಲು ಸದರಿ ನಿಗಮಂಗಳು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ೧೯೮೬–೮೭ನೇ ಸಾಲಿನಲ್ಲಿ ಬೀಜೋತ್ಪಾದನೆಗೆಂದು ೧೦.೦೦ ಲಕ್ಷ ರೂಗಳನ್ನು ಕರ್ನಾಟಕ ರಾಜ್ಯ ಬೀಜ ನಿಗಮಕ್ಕೂ ಮತ್ತು ೫.೧೫ ಲಕ್ಷ ರೂ.ಗಳನ್ನು ಕರ್ನಾಟಕ ಸಹಕಾರ ಎಣ್ಣೆಕಾಳು ಬೆಳೆಗಾರರ ಮಹಾ ಮಂಡಳಕ್ಕೂ ಸರ್ಕಾರವು ಮಂಜೂರು ಮಾಡಿರುತ್ತದೆ. ೧೯೮೭–೮೮ನೇ ಸಾಲಿನಲ್ಲಿ ಇಲ್ಲಿಯವರೆಗೂ ಯಾವ ಹಣವನ್ನು ಮಂಜೂರು ಮಾಡಿರುವುದಿಲ್ಲ.

ಆ) ಕರ್ನಾಟಕ ರಾಜ್ಯ ಬೀಜ ನಿಗಮವು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬೀಜೋತ್ಪಾದನೆಯನ್ನು ಕೈಗೊಂಡಿರುತ್ತದೆ. ಕರ್ನಾಟಕ ಸಹಕಾರ ಎಣ್ಣೆಕಾಳು ಬೆಳೆಗಾರರ ಮಹಾ ಮಂಡಳವು ಬಿಜಾಪುರ, ರಾಯಚೂರು, ಗುಲ್ಬರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಾತ್ರ ಬೀಜೋತ್ಪಾದನೆಯನ್ನು ಕೈಗೊಂಡಿರುತ್ತದೆ.